# ಸುಳ್ಳುಸುದ್ದಿ ಗುರುತಿಸುವುದು ಹೇಗೆ?

- ಗೊಂದಲ ಉಂಟಾಗುವ ಸುದ್ದಿಯನ್ನು ಓದಿದಲ್ಲಿ, ಆ ಸುದ್ದಿಯ ಮೂಲ ಎಲ್ಲಿಯದು ಎಂದು ಚಿಂತಿಸಿ. ಇದು ಸುದ್ದಿಯ ಉದ್ದೇಶ ಮತ್ತು ನಿಖರತೆಯ ಬಗ್ಗೆ ಬೆಳಕನ್ನು ಚೆಲ್ಲಬಹುದು.
- ಬರೀ ಸುದ್ದಿ ಶೀರ್ಷಿಕೆಯನ್ನು ಮಾತ್ರ ಓದದೆ, ಇಡೀ ಲೇಖನವನ್ನು ಓದಿರಿ. ಯಾಕೆಂದರೆ ಕಣ್ಸೆಳೆಯುವ ಶೀರ್ಷಿಕೆ ಒಂದು ಅರ್ಥವನ್ನು ನೀಡಿದರೆ, ಬರಹ ಮತ್ತೇನನ್ನೋ ಹೇಳಬಹುದು.
- ಬರೆದವರು ಯಾಕೆ ಬರೆದಿದ್ದಾರೆ, ಅವರು ಯಾರ ಹಿಂಬಾಲಕರು, ಅವರು ನಂಬಲರ್ಹರೇ ಎನ್ನುವುದನ್ನು ಯೋಚಿಸಿ. ಕೆಲವರು ತಮ್ಮ ವೈಯಕ್ತಿಕ ನಂಬುಗೆಗಳನ್ನು ಇತರರ ಮೇಲೆ ಹೇರುವ ಪ್ರಯತ್ನಗಳನ್ನು ಮಾಡುತ್ತಿರಬಹುದು. ಬರವಣಿಗೆ ಏಕಮುಖವಾಗಿರಬಹುದು, ಗಮನಿಸಿ.
- ಸುದ್ದಿಗೆ ಯಾವ ಆಧಾರಗಳನ್ನು ಕೊಡುತ್ತಿದ್ದಾರೆ ಎಂಬುದನ್ನು ಗಮನಿಸಿ. ಉದಾಹರಣೆಗೆ, ಬಲಪಂಥೀಯ ಅಥವಾ ಎಡಪಂಥೀಯ ವಿಚಾರಗಳಲ್ಲಿ ನಂಬುಗೆಯುಳ್ಳವರು ಅಂತಹುದೇ ವಿಚಾರಧಾರೆಗಳನ್ನು ಪ್ರತಿಪಾದಿಸುವ ಮತ್ತೊಂದು ಲೇಖನವನ್ನು ಆಧಾರವಾಗಿ ನೀಡಬಹುದು. ಹಲವು ಪತ್ರಿಕೆಗಳು ಕೆಲವು ರಾಜಕೀಯ ನಿಲುವುಗಳನ್ನು ಅಳವಡಿಸಿಕೊಂಡು ಅಂತಹುದೇ ವಿಚಾರಗಳನ್ನು ಪ್ರತಿಪಾದಿಸುತ್ತಿರುವುದು ಎಲ್ಲ ದೇಶಗಳಲ್ಲಿಯೂ ನಿಜ.
- ಲೇಖನದ ಉದ್ದೇಶ ಲೇವಡಿಯೇ ಅಥವಾ ವಿಡಂಬನೆಯೇ ಎಂದು ಪ್ರಶ್ನಿಸಿಕೊಳ್ಳಿ. ಎಲ್ಲ ಮಾಹಿತಿಗಳಲ್ಲಿಯೂ ನೇರನುಡಿಗಳಿಲ್ಲದಿರಬಹುದು.
- ಮಾಹಿತಿಗಳನ್ನು ಓದುವಾಗ ಅವುಗಳನ್ನು ಒಪ್ಪಿಕೊಳ್ಳಲು ನಿಮ್ಮ ವೈಯಕ್ತಿಕ ನಿಲುವುಗಳು ಅಡ್ಡಬರುತ್ತಿವೆಯೇ ಪ್ರಶ್ನಿಸಿಕೊಳ್ಳಿ. ಮಾನಸಿಕ ತಜ್ಞರ ಪ್ರಕಾರ, ನಮ್ಮ ಪೂರ್ವಗ್ರಹಗಳಿಗುಣವಾಗಿ ನಾವು ಒಂದು ವಿಚಾರವನ್ನು ಒಪ್ಪಿಕೊಳ್ಳುತ್ತೇವೆ ಅಥವಾ ಸುಲಭವಾಗಿ ನಿರಾಕರಿಸುತ್ತೇವೆ. ಬೇರೆಲ್ಲ ಮಾಪನಗಳ ಮೇರೆಗೆ ಲೇಖನ–ಮಾಹಿತಿ ಸರಿಯಾಗಿದ್ದಲ್ಲಿ ನಿಮ್ಮ ನಂಬುಗೆಯ ಪರಿಧಿಗಳನ್ನು ಹಿಗ್ಗಿಸಿಕೊಳ್ಳಬಹುದು.
- ಸುದ್ದಿಯ ಬಗ್ಗೆ ಅನುಮಾನಗಳು ಉಂಟಾದಾಗ ನಿಪುಣರ, ಹೆಚ್ಚು ತಿಳಿದವರ ಅಭಿಪ್ರಾಯಗಳನ್ನು ಪಡೆಯಬಹುದು.
- ಸುಳ್ಳುಸುದ್ದಿಗಳ ಇರುವಿಕೆ ನಮ್ಮ ಇರುವಿಕೆಯಷ್ಟೇ ನಿಜ. ಇದು ನಮ್ಮಷ್ಟೇ ದೀರ್ಘ ಚರಿತ್ರೆಯನ್ನೂ ಹೊಂದಿದೆ. ಈ ಕಾರಣ ಎಲ್ಲವನ್ನೂ ತುಲನಾತ್ಮಕವಾಗಿ ತಿಳಿದುಕೊಳ್ಳಿ. ಭಾವನಾತ್ಮಕವಾಗಿ ಯಾವ ವಿಚಾರವನ್ನೂ ಸುಲಭವಾಗಿ ನಂಬದಿರಿ.
- ಪ್ರಪಂಚದಲ್ಲಿ ಬಹಳಷ್ಟು ಉತ್ತಮ ಮತ್ತು ನಿಖರವಾದ ಮಾಹಿತಿಗಳಿವೆ. ಸುಳ್ಳುಸುದ್ದಿಗಳು ಅವುಗಳನ್ನು ಕಲುಷಿತಗೊಳಿಸುತ್ತಿವೆ. ಕೆಲವೊಮ್ಮೆ ಇಡೀ ಮಾಹಿತಿಯೇ ತಪ್ಪಿರಬಹುದು. ಅಥವಾ ಅದರಲ್ಲಿ ಅರೆಬರೆ ಸುಳ್ಳು ಹೊಂದಿರಬಹುದು.
- ಮಾಧ್ಯಮಗಳು ಸುದ್ದಿಗಳನ್ನು ಅಲ್ಪ ಸ್ವಲ್ಪ ಉತ್ಪ್ರೇಕ್ಷೆಯಿಂದ ಬರೆಯಬಹುದು. ಉದ್ದೇಶಪೂರ್ವಕ ಸುಳ್ಳುಸುದ್ದಿಯಷ್ಟೇ ಮಾಹಿತಿಯ ದಾರಿಯನ್ನು ತಪ್ಪಿಸುವುದು. ಹಾಗಾಗಿ ಸತ್ಯ–ಸುಳ್ಳನ್ನು ಬೇರ್ಪಡಿಸಿ ಓದುವ ಹೊಸ ಕಲೆಯನ್ನು ಓದುಗರು ಕಲಿಯದೆ ಬೇರೆ ಮಾರ್ಗವಿಲ್ಲ.

